# ಸಮಾಜ ವಿಜ್ಞಾನ

**ತರಗತಿ : 10 ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ –3** **ಅಂಕಗಳು : 80**

**ವಿಷಯ: ಸಮಾಜ ವಿಜ್ಞಾನ (85k)** **ಸಮಯ : 3–15 ನಿಮಿಷ.**

**I ಬಹು ಆಯ್ಕೆ ಪ್ರಶ್ನೆಗಳು 8*1=8**

1) ರಾಜ್ಯ ಪುನರ್ವಿಂಗಡಣಾ ಆಯೋಗ ರಚಿಸಿದ ವರ್ಷ – ಎ) 1953

2) ಫ್ಯಾಸಿಸ್ಟ ಪಕ್ಷದ ಸ್ಥಾಪಕರು – ಸಿ) **ಮುಸೊಲೊನಿ.**

3) ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣ ಸಂಸ್ಥೆ – ಬಿ) **ಲೋಕಾಯುಕ್ತ.**

4) ಸಂಘಟಿತ ಕೆಲಸಗಾರರಿಗೆ ಉದಾಹರಣೆ – **ಡಿ) ವಿಮಾ ಕಂಪನಿಗಳು.**

5) ದ್ರವರೂಪದ ಚಿನ್ನ ಎಂದು ಕರೆಯುವುದು – ಎ) **ಪೆಟ್ರೋಲಿಯಂ.**

6) ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಮೊಟ್ಟ ಮೊದಲು ಆರಂಭವಾದ ದೇಶ – **ಬಿ) ಕೆನಡಾ.**

7) ರಾಷ್ಟ್ರೀಯ ಯೋಜನಾ ಆಯೋಗದ ಅಧ್ಯಕ್ಷರು– ಸಿ) **ಪ್ರಧಾನಮಂತ್ರಿ**

8) ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನು – ಬಿ) **ಉದ್ಯಮಿ**

**II ಒಂದು ವಾಕ್ಯದಲ್ಲಿ ಉತ್ತರಿಸಿರಿ 8*1=08**

9) **ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?**
**ಉತ್ತರ:** ಡಾ.ಬಾಬು ರಾಜೇಂದ್ರ ಪ್ರಸಾದ.

10) **ಹೋಲೊಕಾಸ್ಟ ಎಂದರೇನು?**
**ಉತ್ತರ:** ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳು.

11) **ಭಾರತ ಮತ್ತು ಚೀನಾ ಮಧ್ಯೆ ಏಕೆ ಮನಸ್ತಾಪವಿದೆ?**
**ಉತ್ತರ:** ಭಾರತದಲ್ಲಿ ನಕ್ಸಲ್‌ವಾದ ಪಸರಿಸುವುದರಿಂದ ಮನಸ್ತಾಪವಿದೆ.

12) **ನಮ್ಮ ಸಂವಿಧಾನದ 24ನೇ ವಿಧಿಯು ಅತ್ಯಂತ ಮಹತ್ವದ್ದಾಗಿದೆ. ಏಕೆ?**
**ಉತ್ತರ:** 14 ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ ಎಂದಿದೆ.

13) **ಶಿಕ್ಷಣ ಹಕ್ಕು ಕಾಯ್ದೆಯನ್ನು ಏಕೆ ಜಾರಿಗೆ ತರಲಾಗಿದೆ?**
**ಉತ್ತರ:** 6 ರಿಂದ 14 ವರ್ಷದ ಒಳಗಿನ ಮಕ್ಕಳಿಗೆ ಕಡ್ಡಾಯ ಉಚಿತ ಶಿಕ್ಷಣ ನೀಡಲು ಜಾರಿಗೆ ತರಲಾಗಿದೆ.

14) **ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತ ಕಡಿಮೆ. ಏಕೆ?**
**ಉತ್ತರ:** ನೈರುತ್ಯ ಮಾನ್ಸೂನ್ ಮಾರುತಗಳ ಬೀಸುವಿಕೆ.

15) **ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸರ್ಕಾರಗಳು ಕೊರತೆಯ ಆಯ–ವ್ಯಯವನ್ನು ಮಂಡಿಸುತ್ತವೆ. ಏಕೆ?**
**ಉತ್ತರ:** ತನ್ನ ವೆಚ್ಚವನ್ನು ಹೆಚ್ಚು ಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸುತ್ತವೆ.

16) **ಕಿಸಾನ್ ವಿಕಾಸ್ ಪತ್ರಗಳನ್ನು ನೀಡುವ ಸಂಸ್ಥೆ ಯಾವುದು?**
**ಉತ್ತರ:** ಅಂಚೆ ಕಛೇರಿ.

**III. ಈ ಕೆಳಗಿನ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ. 8*2=16**

17) **ಎಂ.ಜಿ.ರಾನಡೆಯವರು ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದ್ದು ಹೇಗೆ?**

- ಸಮಾಜ ಸುಧಾರಣೆಗೆ ಒತ್ತು.
- ಹಿಂದೂ– ಮುಸ್ಲಿಂ ಏಕತೆಗೆ ಪ್ರತಿಪಾದನೆ.
- ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಸಕ್ರೀಯವಾಗಿ ಭಾಗಿ.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೌಢಶಾಲೆ ಆರಂಭ.
- ರಾಜಕೀಯ & ಆರ್ಥಿಕ ಪ್ರಗತಿಗೆ ಆಸಕ್ತಿ.

18) **ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಶೋಚನೀಯವಾಗಿತ್ತು. ಸಮರ್ಥಿಸಿರಿ.**

- ಸ್ಥಾನಮಾನದಲ್ಲಿ ಭಿನ್ನತೆ.
- ವೇತನ ತಾರತಮ್ಯ.
- ಬಡ್ತಿಯಲ್ಲಿ ವ್ಯತ್ಯಾಸ.
- ಸಾಗರೋತ್ತರ ಸೇವೆಗೆ ಒತ್ತಾಯ.
- ಧಾರ್ಮಿಕ ಭಾವನೆಗಳಿಗೆ ಧಕ್ಕೆ.

19) **ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳಾವುವು?**

- ಬಿ.ಪಿ.ಎಲ್.ಕಾರ್ಡ ವಿತರಣೆ.
- ಪಂಚವಾರ್ಷಿಕ ಯೋಜನೆ.
- ತಲಾ ಆದಾಯ ಹೆಚ್ಚಳಕ್ಕೆ ಪ್ರಯತ್ನ.
- ಜವಾಹರ ರೋಜಗಾರ್ ಯೋಜನೆ.
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆ.
- ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ. **ಅಥವಾ**

**ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ?**

- ಭಾರತ ಒಂದು ಶಾಂತಿಪ್ರಿಯ ದೇಶ.
- ಶಸ್ತ್ರಾಸ್ತ್ರಗಳ ನಿಯಂತ್ರಣಕ್ಕೆ ಆದ್ಯತೆ.
- ಯುದ್ಧದ ಸಂಭವ.
- ಅಣ್ವಸ್ತ್ರ ಬಳಕೆಯ ಸಂಭವ.
- ಜಾಗತಿಕ ಸುರಕ್ಷತೆಯ ಕಳಕಳಿ.
- ಪರಸ್ಪರ ನಿಶ್ಚಿತ ನಾಶದ ಅರಿವು.

20) **ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?**

- ಸಂವಿಧಾನಾತ್ಮಕ ಸೌಲಭ್ಯಗಳು.
- ಹಿಂದುಳಿದ ಜಾತಿ–ವರ್ಗದವರಿಗೆ ವಿಶೇಷ ಸೌಲಭ್ಯ.
- ಸಾಕ್ಷರತೆ ಪ್ರಮಾಣ ಹೆಚ್ಚಳ.
- ಜನರಲ್ಲಿ ಸಾಮಾಜಿಕ ಜಾಗೃತಿ ತರುವುದು.
- ಸಾಮಾಜಿಕ ಸಾಮರಸ್ಯ ಮೂಡಿಸುವುದು.

**ಅಥವಾ**

**ಚಿಪ್ಕೋ ಚಳುವಳಿಯನ್ನು ಏಕೆ ಕೈಗೊಳ್ಳಲಾಯಿತು?**

- ಸುಂದರ್ ಲಾಲ್ ಬಹುಗುಣ ಮತ್ತು ಚಂಡಿ ಪ್ರಸಾದ್‌ಭಟ್ಟರವರ ನೇತೃತ್ವ.
- ಮರ ಕಡಿಯಲು ಸರ್ಕಾರದಿಂದ ಅನುಮತಿ.
- ಪರಿಸರ ಹಾನಿ ಭೀತಿ.
- ಅರಣ್ಯ ನಾಶ ಸಾಧ್ಯತೆ.
- ಮರ ಅಪ್ಪಿ ಪ್ರತಿಭಟನೆ.
- ಮರ ಕಡಿಯಲು ನೀಡಿದ ಅನುಮತಿ ರದ್ದು.

**21) ಭಾರತದ ವ್ಯವಸಾಯ 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ' ಚರ್ಚಿಸಿರಿ.**

- ಮಾನ್ಸೂನ್ ಮಾರುತಗಳಿಂದ ಕೃಷಿಯ ನಿಯಂತ್ರಣ.
- ಮಳೆ ವಿಫಲವಾದರೆ ಬರಗಾಲ ಸಂಭವ.
- ಅಧಿಕ ಮಳೆಯಿಂದ ಪ್ರವಾಹ ಸಾಧ್ಯತೆ.
- ಪ್ರಾಣಿ ಹಾನಿ & ಆಸ್ತಿ ನಾಶ.

**22) ತುಂಗಭದ್ರಾ ಯೋಜನೆಯ ಕುರಿತು ಟಿಪ್ಪಣಿ ಬರೆಯಿರಿ.**

- ಕರ್ನಾಟಕ, ಆಂಧ್ರ ಪ್ರದೇಶಗಳ ಸಂಯುಕ್ತ ಯೋಜನೆ.
- ಮಲ್ಲಾಪುರದಲ್ಲಿ ಆಣೆಕಟ್ಟು ನಿರ್ಮಾಣ.
- ಇದರ ಜಲಾಶಯದ ಹೆಸರು ಪಂಪಸಾಗರ.
- ನೀರಾವರಿ, ವಿದ್ಯುತ್ ಉತ್ಪಾದನೆ ಮುಖ್ಯ ಉದ್ದೇಶ.

**23) ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ವಿವರಿಸಿ.**

- ಹಳ್ಳಿಯ ಅಧಿಕಾರ ಹಾಗೂ ಅಭಿವೃದ್ಧಿ ಜವಾಬ್ದಾರಿ ಹಳ್ಳಿಯ ಜನರಿಗೆ ವಹಿಸುವುದು.
- ಸ್ವಾವಲಂಬಿ, ಸ್ವಯಂಪೂರ್ಣ, ಸಮೃದ್ಧ ಗ್ರಾಮ ಅಭಿವೃದ್ಧಿ.
- ಗಾಂಧೀಜಿ ಇದನ್ನೆ ಗ್ರಾಮ ಸ್ವರಾಜ್ಯ ಎಂದಿದ್ದಾರೆ.
- ಶೋಷಣೆಗೆ ತಡೆ.
- ಮಾನವನ ಸ್ವಾತಂತ್ರ್ಯ & ಘನತೆ ಸಂರಕ್ಷಣೆ.
- ಮಾನವೀಯ ಮೌಲ್ಯಗಳ ವೃದ್ಧಿ.

**24) ಗ್ರಾಹಕರ ಹಕ್ಕುಗಳ ಕಾಯ್ದೆಯು ಗ್ರಾಹಕರಿಗೆ ನೀಡಿರುವ ಹಕ್ಕುಗಳು ಯಾವುವು?**

- ಮಾಹಿತಿ ಪಡೆಯುವ ಹಕ್ಕು.
- ವಸ್ತುಗಳ ಆಯ್ಕೆಯ ಹಕ್ಕು.
- ವಸ್ತುಗಳ ಬಗ್ಗೆ ಆಲಿಸುವ ಹಕ್ಕು.
- ಶೋಷಣೆಯ ವಿರುದ್ದ ಪರಿಹಾರದ ಹಕ್ಕು.
- ಗ್ರಾಹಕರ ಶಿಕ್ಷಣದ ಹಕ್ಕು.
- ವಂಚನೆಯ ವಿರುದ್ದದ ಹಕ್ಕು.

**IV ಐದು-ಆರು ವಾಕ್ಯದಲ್ಲಿ ಉತ್ತರಿಸಿರಿ. 9*3=27**

**25) 2ನೇ ಕಾರ್ನಾಟಿಕ್ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿರಿ**

- ಫ್ರೆಂಚರಿಂದ ಹೈದರಾಬಾದ ನಿಜಾಮನಾಗಿ ಸಲಾಬತ್‌ಜಂಗನ ನೇಮಕ.
- ನಿಜಾಮನ ರಕ್ಷಣೆಗೆ ಬುಸ್ಸಿ ಎಂಬಅಧಿಕಾರಿ ನೇಮಕ.
- ಫ್ರೆಂಚರಿಂದ ಕಾರ್ನಾಟಿಕ್ ನವಾಬನಾಗಿ ಚಂದಾಸಾಹೇಬ ಆಯ್ಕೆ.
- ಕ್ಲೈವ್‌ನಿಂದ ಫ್ರೆಂಚರು, ಚಂದಾಸಾಹೇಬನಿಗೆ ಸೋಲು.
- ಚಂದಾಸಾಹೇಬನ ಬಂಧನ ಮತ್ತು ಹತ್ಯೆ.
- ಬ್ರಿಟಿಷ್‌ರಿಂದ ಕಾರ್ನಾಟಿಕ್ ನವಾಬನಾಗಿ ಮಹಮ್ಮದ್ ಅಲಿ ನೇಮಕ.
- ಪಾಂಡಿಚೇರಿ ಒಪ್ಪಂದದೊಂದಿಗೆ ಯುದ್ಧ ಮುಕ್ತಾಯ.

**ಅಥವಾ**

**ಪಂಜಾಬ ಬ್ರಿಟಿಷರ ಆಶ್ರಿತ ರಾಜ್ಯವಾದುದ್ದು ಹೇಗೆ?**

- ಬ್ರಿಟಿಷರಿಂದ ನಿರಂತರ ಮೈತ್ರಿ ಒಪ್ಪಂದ ಉಲ್ಲಂಘನೆ.
- ಬ್ರಿಟಿಷರಿಂದ ಪಂಜಾಬ ಆಕ್ರಮಣಕ್ಕೆ ಸಂಚು.
- ದೇಶದ್ರೋಹಿಗಳಿಂದ ಸಿಖ್ಖರಿಗೆ ಸೋಲು.
- ಲಾಹೋರ್ ಒಪ್ಪಂದಕ್ಕೆ ಸಹಿ.
- ಬ್ರಿಟಿಷ ರೆಸಿಡೆಂಟ ಪಂಜಾಬಿನ ನಿಜವಾದ ಆಡಳಿತಗಾರನಾದನು.

**26) ಹಲಗಲಿ ಬೇಡರ ದಂಗೆಯನ್ನು ವಿವರಿಸಿರಿ.**

- ಬ್ರಿಟಿಷರಿಂದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ಜಾರಿ.
- ಬೇಡರ ಬಂದೂಕುಗಳ ಮೇಲೆ ನಿರ್ಬಂಧ.
- ಬೇಡರಿಂದ ಬೇಟೆಯಾಡುವ ಬಂದೂಕು ಹಿಂತಿರುಗಿಸಲು ವಿರೋಧ.
- ಬೇಡರು ತಮ್ಮ ಹಕ್ಕಿಗಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದರು.
- ಹಲಗಲಿ ಬೇಡರೊಂದಿಗೆ ಮಂಟೂರು, ಬೋದಾನಿ, ಆಲಗುಂಡಿ ಬೇಡರ ಸೇರ್ಪಡೆ.
- ಬ್ರಿಟಿಷರಿಂದ ಹಲಗಲಿ ಮುತ್ತಿಗೆ, ಬಂಡಾಯ ಶಮನ.
- ಬೇಡರನ್ನು ಹತ್ತಿಕ್ಕಿ, ಗಲ್ಲಿಗೇರಿಸಲಾಯಿತು.

**27) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ & ಕಾರ್ಮಿಕರ ಪ್ರತಿಭಟನೆ ವಿವರಿಸಿರಿ.**

➢ **ರೈತರ ಪ್ರತಿಭಟನೆಗಳು**

- ಜಮೀನ್ದಾರರು ಮತ್ತು ಪ್ಲಾಂಟರ್‌ಗಳ ವಿರುದ್ಧ ದಂಗೆ.
- ಚಂಪಾರಣ್ಯದಲ್ಲಿ ನೀಲಿ ಬೆಳೆಯುವದಕ್ಕೆ ವಿರೋಧ.
- ಭೂಕಂದಾಯದ ವಿರುದ್ಧ ಹರತಾಳ.
- ಗಾಂಧೀಜಿ ಅಧಿಕಾರಿಗಳ ಮನವೊಲಿಸಿ ತೆರಿಗೆ ರದ್ದು ಮಾಡಿದರು.
- ಚಂಪಾರಣ್ಯ, ಖೇಡಾ ಪ್ರಮುಖ ಚಳುವಳಿಗಳು.
- ಕಿಸಾನ್ ಸಭಾದಡಿ ಹೋರಾಟ ಜರುಗಿದವು.
- ಜಮೀನ್ದಾರರ ಶೋಷಣೆಯ ವಿರುದ್ಧ ಬಂಗಾಳದ ರೈತರ ದಂಗೆ.
- ತೆಲಂಗಾಣದಲ್ಲಿ ಜಮೀನ್ದಾರರು ಹಾಗೂ ನಿಜಾಮನ ರಜಾಕರ ವಿರುದ್ಧ ಪ್ರತಿಭಟನೆ.
- ಮಹಾರಾಷ್ಟ್ರದಲ್ಲಿ ಕಡಿಮೆ ಕೂಲಿ ವಿರುದ್ಧ ರೈತರ ಚಳುವಳಿ.

➢ **ಕಾರ್ಮಿಕ ಬಂಡಾಯ**

- 1827ರಲ್ಲಿ ಕಲ್ಕತ್ತಾದಲ್ಲಿ ಕಾರ್ಮಿಕ ಹೋರಾಟ ಆರಂಭ.
- ಕೂಲಿ ಕಾರ್ಮಿಕರಿಂದ ಬೇಡಿಕೆಗಳಿಗಾಗಿ ಸಂಘಟನೆ.
- ರೈಲ್ವೆ ಅಧಿಕಾರಿಗಳ ವಿರುದ್ಧ ಅಧಿಕ ಕೂಲಿಗಾಗಿ ಘೋಷಣೆ.
- ಕೊಲ್ಕತ್ತ, ಬಾಂಬೆ ಹತ್ತಿ ಬಟ್ಟೆ ಕಾರ್ಮಿಕರು ರಾಷ್ಟ್ರೀಯ ಜಾಗೃತಿ ಮೂಡಿಸಿದರು.
- ಮದ್ರಾಸ್ ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆ.
- ಕಾಂಗ್ರೆಸ್‌ನಿಂದ ಕಾರ್ಮಿಕ ಸಂಘಟನೆಗಳ ಚಳುವಳಿಗೆ ಬೆಂಬಲ.

**28) ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆಯಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.**

- ರಾಜಕೀಯ ಸಂಘರ್ಷ ನಿವಾರಣೆ.
- ಸೂಯೆಜ್ ಕಾಲುವೆ ಬಿಕ್ಕಟ್ಟು ಶಮನ.
- ಇರಾನ್, ಕಾಶ್ಮೀರ ಸಮಸ್ಯೆಗೆ ಪರಿಹಾರ.
- ಅರಬ್ – ಇಸ್ರೇಲ್ ವಿವಾದ ನಿವಾರಣೆ.
- ಕೊರಿಯಾ, ಹಂಗೇರಿ, ಕಾಂಗೋ ವಿವಾದ ಬಗೆಹರಿಸಿದೆ.
- ನಮೀಬಿಯಾ, ಅಫ್ಘಾನಿಸ್ತಾನ ಸಮಸ್ಯೆ ಇತ್ಯರ್ಥ.
- ಅಣ್ವಸ್ತ್ರ ಹಾಗೂ ನಿಶ್ಯಸ್ತ್ರೀಕರಣಕ್ಕೂ ನಿರಂತರ ಪ್ರಯತ್ನ.

**29) ಅಸಂಘಟಿತ ಕೆಲಸಗಾರರ ಸಮಸ್ಯೆಗಳನ್ನು ವಿವರಿಸಿರಿ.**

- ನಿಗದಿತ ನಿಯಮ, ಕಾಯ್ದೆಗಳು ಇಲ್ಲ.
- ಕಡಿಮೆ ಕೂಲಿ.
- ವೈದ್ಯಕೀಯ ಸೌಲಭ್ಯಗಳಿಲ್ಲ.
- ಕೆಲಸದ ಅಭದ್ರತೆ.
- ನಿಗದಿತ, ವಿರಾಮ ಹಾಗೂ ನಿವೃತ್ತಿ ವೇತನಗಳಿಲ್ಲ.
- ಉದ್ಯೋಗಪತಿಗಳಿಂದ ಶೋಷಣೆಗೆ ಬಲಿ.

**30) ಪೂರ್ವ & ಪಶ್ಚಿಮ ಘಟ್ಟಗಳ ನಡುವಿನ ವ್ಯತ್ಯಾಸ ತಿಳಿಸಿ.**

| **ಪಶ್ಚಿಮ ಘಟ್ಟಗಳು** | **ಪೂರ್ವ ಘಟ್ಟಗಳು** |
|---|---|
| • ಎತ್ತರವಾಗಿವೆ.<br>• ನಿರಂತರವಾಗಿವೆ.<br>• ನದಿ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿಲ್ಲ. | • ಎತ್ತರವಾಗಿಲ್ಲ.<br>• ನಿರಂತರವಾಗಿಲ್ಲ.<br>• ನದಿ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. |

**31) ಉಷ್ಣವಲಯದ ಹುಲ್ಲುಗಾವಲು ಅರಣ್ಯ ಕುರಿತು ವಿವರಿಸಿ.**

- 60–70 ಸೆಂ.ಮೀ.ಮಳೆ ಪ್ರದೇಶದಲ್ಲಿ ಹಬ್ಬಿವೆ.
- ಎತ್ತರವಾದ ಹುಲ್ಲು ಬೆಳೆಯುತ್ತದೆ.
- ಕುರುಚಲ ಜಾತಿಯ ಸಸ್ಯವರ್ಗ ಕಾಣುತ್ತೆವೆ.
- ದಖನ್ ಪ್ರಸ್ಥಭೂಮಿಯ ಕೇಂದ್ರಭಾಗ, ಥಾರ್ ಮರಭೂಮಿ ಅಂಚುಗಳಲ್ಲಿ ಬೆಳೆಯುತ್ತವೆ.
- ಬಬೂಲ್, ಶಿಷಮ್, ಸಭಾಯ್ ಹುಲ್ಲು.

**ಅಥವಾ**

**ಭಾರತದ ಭೂ ಬಳಕೆಯ ವಿವಿಧ ಪ್ರಕಾರಗಳನ್ನು ವಿವರಿಸಿರಿ.**

- ನಿವ್ವಳ ಸಾಗುವಳಿ ಕ್ಷೇತ್ರ..
- ಅರಣ್ಯ ಭೂಮಿ.
- ವ್ಯವಸಾಯೇತರ ಭೂ ಬಳಕೆ.
- ಬೀಳು ಭೂಮಿ.
- ಹುಲ್ಲುಗಾವಲು.
- ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ.

**32) ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಮಹತ್ವವೇನು?**

- ಮೂಲ ಸೌಕರ್ಯ ಕಲ್ಪಿಸುವುದು.
- ಮಾನವ ಸಂಪನ್ಮೂಲ ಅಭಿವೃದ್ಧಿ.
- ಉದ್ಯೋಗಾವಕಾಶ ಒದಗಿಸುವುದು.
- ಕೃಷಿ, ನೀರಾವರಿ ವಿಸ್ತರಣೆ.
- ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ.
- ಬಡತನ ನಿರ್ಮೂಲನೆ
- ನಿರುದ್ಯೋಗ ನಿವಾರಣೆ.
- ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳಿಸುವುದು.
- ಅರ್ಹರಿಗೆ ಸರ್ಕಾರದ ಸೌಲಭ್ಯ

**ಅಥವಾ**

**ಭಾರತದ ಪಂಚವಾರ್ಷಿಕ ಯೋಜನೆ ಸಾಧನೆಗಳನ್ನು ಪಟ್ಟಿ ಮಾಡಿರಿ.**

- ಅಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ.
- ಕೈಗಾರಿಕಾ & ಸೇವಾವಲಯದ ವಿಸ್ತರಣೆ.
- ಉದ್ಯೋಗವಕಾಶಗಳ ಹೆಚ್ಚಳ.
- ಬಡತನ ನಿರ್ಮೂಲನೆ.
- ಎಲ್ಲರನ್ನೊಳಗೊಂಡ ಬೆಳವಣಿಗೆಗೆ ಆದ್ಯತೆ.
- ಸಾಕ್ಷರತಾ ಪ್ರಮಾಣ ಹೆಚ್ಚಳ.
- ಶಿಶು ಮತ್ತು ತಾಯಂದಿರ ಮರಣ ಪ್ರಮಾಣ ಇಳಿಕೆ.
- ವಿಜ್ಞಾನ & ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ.
- ತಂತ್ರಜ್ಞಾನದ ರಫ್ತು.
- ಎಂಜಿನಿಯರಿಂಗ್ ಕ್ಷೇತ್ರದ ಪ್ರಗತಿ.
- ಆರ್ಥಿಕ ಅಸಮಾನತೆ ನಿವಾರಣೆ.
- ನಿರೀಕ್ಷಿತ ಜೀವಿತಾವಧಿ ಹೆಚ್ಚಳ.
- ಜನಸಂಖ್ಯಾ ಬೆಳವಣಿಗೆ ದರ ಕಡಿಮೆ.

**33) ಬ್ಯಾಂಕ್ ಖಾತೆಯನ್ನು ತೆಗೆಯುವ ವಿಧಾನಗಳನ್ನು ತಿಳಿಸಿ.**

- ಯಾವ ವಿಧದ ಖಾತೆ ತೆರೆಯಬೇಕೆಂದು ನಿರ್ಧಾರ.
- ಬ್ಯಾಂಕ್ ಅಧಿಕಾರಿ ಸಂಪರ್ಕ.
- ಪ್ರಸ್ತಾವನೆ ಅರ್ಜಿ ತುಂಬುವುದು.
- ಪರಿಚಿತರ ಉಲ್ಲೇಖ.
- ಅರ್ಜಿಯನ್ನು ಬ್ಯಾಂಕಿಗೆ ಒಪ್ಪಿಸುವುದು.
- ಅಧಿಕಾರಿಯ ಒಪ್ಪಿಗೆ.
- ಪ್ರಾರಂಭಿಕ ಠೇವಣಿ.

**ಅಥವಾ**

**ಒಬ್ಬ ವ್ಯಕ್ತಿಗೆ ಸ್ವ ಉದ್ಯೋಗ ಉದ್ದಿಮೆ ಸ್ಥಾಪಿಸಲು ಇರುವ ಸಂಸ್ಥೆಗಳನ್ನು ಪಟ್ಟಿ ಮಾಡಿರಿ**

- ಜಾಹಿರಾತು ಸೇವಾಸಂಸ್ಥೆಗಳು.
- ಮಾರುಕಟ್ಟೆ ಸಲಹಾ ಸಂಸ್ಥೆ.
- ಕೈಗಾರಿಕಾ ಸಲಹಾ ಸಂಸ್ಥೆ.
- ಬ್ಯೂಟಿ ಪಾರ್ಲರ್‌ಗಳು.
- ಛಾಯಾ ಪ್ರತಿ ತೆಗೆಯುವ ಕೇಂದ್ರಗಳು.
- ಅಂತರ್ಜಾಲ & ಸಂವಹನ ಕೇಂದ್ರಗಳು.
- ವಸ್ತುಗಳನ್ನು ಬಾಡಿಗೆಗೆ ನೀಡುವ ಸಂಸ್ಥೆಗಳು.

**V ಎಂಟು-ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 4*4=16**

**34) ಡಾ. ಬಿ. ಆರ್. ಅಂಬೇಡ್ಕರ್‌ರವರ ಸಾಮಾಜಿಕ ಸಮಾನತೆಯ ಕಾಳಜಿಯನ್ನು ಉದಾಹರಣೆ ಸಹಿತ ವಿವರಿಸಿ**

- ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಪ್ರತಿಪಾದನೆ.
- ಜಾತಿ ವ್ಯವಸ್ಥೆ ವಿರುದ್ಧ ಹೋರಾಟ.
- ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿ.
- ಮಹಾಡ್ ಮತ್ತು ಕಾಲಾರಾಂ ಚಳುವಳಿರೂಪಿಸಿದರು.
- ‘ಬಹಿಷ್ಕೃತ ಭಾರತ’, ‘ಪ್ರಬುದ್ಧ ಭಾರತ ಪತ್ರಿಕೆ’ ಆರಂಭ
- ‘ಸ್ವತಂತ್ರ ಕಾರ್ಮಿಕ ಪಕ್ಷ’ ಸ್ಥಾಪನೆ.
- ಬಹಿಷ್ಕೃತ ಹಿತಕಾರಣಿ ಸಭಾ ಸಂಘಟನೆ.
- ಜನತಾ’ ಮತ್ತು ‘ಮೂಕನಾಯಕ’ ಪತ್ರಿಕೆ ಆರಂಭ.
- ಕೃಷಿ ಕಾರ್ಮಿಕರ ಏಳಿಗೆಗೆ ಹೋರಾಟ.
- ಸಂವಿಧಾನ ಕರಡು ಸಮಿತಿ ಅಧ್ಯಕ್ಷತೆ.
- ಭಾರತರತ್ನ ಪ್ರಶಸ್ತಿಗೆ ಭಾಜನರು.

**35) ಬ್ರಿಟಿಷರು ಭಾರತದಲ್ಲಿ ತಾವು ಕಟ್ಟಿ ಬೆಳೆಸಿದ ರಾಜ್ಯ ವ್ಯವಸ್ಥೆಗೆ ಹೇಗೆ ಏಕರೂಪತೆಯನ್ನು ಒದಗಿಸಿದರು?**

- ಏಕರೂಪ ರಾಜಕೀಯ ವ್ಯವಸ್ಥೆ ಜಾರಿ.
- ಏಕರೂಪ ಆಡಳಿತ ವ್ಯವಸ್ಥೆ ಜಾರಿ.
- ಹೊಸ ಶಿಕ್ಷಣ ಪದ್ದತಿ.
- ನ್ಯಾಯಾಂಗ ವ್ಯವಸ್ಥೆ.
- ಭೂಕಂದಾಯ ನೀತಿಗಳು.
- ಹೊಸ ಕೃಷಿ & ವ್ಯಾಪಾರ ಪದ್ದತಿ.
- ಆರ್ಥಿಕ ಹಿತಾಸಕ್ತಿ ಸಂರಕ್ಷಣೆ. **ಅಥವಾ**

**ಖಾಯಂ ಜಮೀನ್ದಾರಿ ಪದ್ಧತಿಯನ್ನು ವಿವರಿಸಿ.**

- ಕಾರ್ನ್‌ವಾಲೀಸನಿಂದ ಬಂಗಾಳ, ಬಿಹಾರಗಳಲ್ಲಿ ಜಾರಿ.
- ಜಮೀನ್ದಾರ ಭೂಮಾಲೀಕನಾದನು.
- ರೈತರಿಂದ ಅಧಿಕ ತೆರಿಗೆ ವಸೂಲಿ.
- ಜಮೀನ್ದಾರರು ಮತ್ತು ಬ್ರಿಟಿಷರಿಗೆ ಅಧಿಕ ಲಾಭ.
- ಕ್ರಮೇಣ ಓರಿಸ್ಸಾ, ವಾರಣಾಸಿ, ಆಂಧ್ರಗಳಲ್ಲಿ ವಿಸ್ತರಣೆ.
- ಜಮಿನ್ದಾರರಿಂದ ನಿರ್ದಿಷ್ಟ ಮೊತ್ತದ ಕಂದಾಯ ಸರ್ಕಾರಕ್ಕೆ ಪಾವತಿ.
- ಭೂಮಾಲೀಕರಿಗೆ ಅಧಿಕ ಲಾಭ.


- ವಾರ್ಷಿಕ ನಿರ್ದಿಷ್ಟ ಕಂದಾಯ ವಸೂಲಿ ಉದ್ದೇಶ ಹೊಂದಿದೆ.
- ಜಮೀನ್ದಾರ ಭೂಮಾಲೀಕನಾದನು.
- ರೈತರಿಂದ ಅಧಿಕ ತೆರಿಗೆ ವಸೂಲಿ.
- ಜಮೀನ್ದಾರರು ಮತ್ತು ಬ್ರಿಟಿಷರಿಗೆ ಅಧಿಕ ಲಾಭ.
- ಕ್ರಮೇಣ ಓರಿಸ್ಸಾ, ವಾರಣಾಸಿ, ಆಂಧ್ರಗಳಲ್ಲಿ ವಿಸ್ತರಣೆ.
- ಜಮಿನ್ದಾರರಿಂದ ನಿರ್ದಿಷ್ಟ ಮೊತ್ತದ ಕಂದಾಯ ಸರ್ಕಾರಕ್ಕೆ ಪಾವತಿ.
- ಭೂಮಾಲೀಕರಿಗೆ ಅಧಿಕ ಲಾಭ.

- ಜಮೀನ್ದಾರರ ವರ್ಗ ಸೃಷ್ಟಿ.

**36) ದೇಶದ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವೆಂದು ಪರಿಗಣಿಸಬಹುದಾಗಿದೆ. ಇದನ್ನು ವಿವರಿಸಿರಿ.**

- ರಾಷ್ಟ್ರ ಮಟ್ಟದ ಯೋಜನೆಗಳು.
- ಪ್ರಕೃತಿ ಸಂಪತ್ತು & ಮಾನವ ಸಂಪನ್ಮೂಲ ಸದ್ಬಳಕೆ.
- ಉದ್ಯೋಗಾವಕಾಶ ಹೆಚ್ಚಳ.
- ಕೈಗಾರಿಕಾ ಪ್ರಗತಿ.
- ಅಧಿಕ ರಫ್ತು.
- ಉತ್ತಮ ಶಿಕ್ಷಣ ಕ್ರಮ.
- ತಾಂತ್ರಿಕ ಶಿಕ್ಷಣಕ್ಕೆ ಆದ್ಯತೆ.
- ಕೃಷಿ ಅಭಿವೃದ್ಧಿ.

**37) ಪರ್ವತ ಮಣ್ಣು ಕೆಂಪು ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?**

| ಪರ್ವತ ಮಣ್ಣು | ಕೆಂಪು ಮಣ್ಣು |
|---|---|
| • ಪರ್ಯಾಯ ಪ್ರಸ್ಥಭೂಮಿಯಲ್ಲಿ ಹರಡಿದೆ.<br>• ರಾಗಿ, ಹೊಗೆಸೊಪ್ಪು ಬೆಳೆಗೆ ಸೂಕ್ತ.<br>• 5.18 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ವಿಸ್ತಾರ.<br>• ನೀರಾವರಿಯಿಂದ ಭತ್ತ, ಕಬ್ಬು, ಹತ್ತಿ ಬೆಳೆಯುವರು. | • ಅಧಿಕ ಕೊಳೆತ ಜೈವಿಕಾಂಶದಿಂದ ಕೂಡಿದೆ.<br>• ಸಾರಜನಕ & ಸಾವಯವ ಅವಶೇಷಗಳ ಆಗರ.<br>• ಕಾಫಿ, ಚಹ ಮತ್ತು ಹಣ್ಣು ಬೆಳೆಗೆ ಸೂಕ್ತ.<br>• ಹಿಮಾಲಯ, ಜಮ್ಮು – ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಖಂಡದಲ್ಲಿ ಹರಡಿದೆ. |

**VI 38) ಭಾರತದ ಅಂದವಾದ ನಕ್ಷೆ ಬಿಡಿಸಿ ಎ. ಲಾತೂರ್ ಬಿ. ಬಿಲಾಯ್ ಸಿ. ಮುಂಬೈ ಡಿ. ತಾರಾಪುರ ಗುರುತಿಸಿರಿ. 1+4=5**

